ಜಗದೀಶ ಬಿ. ಹೊಸೂರು, ಮೈಸೂರು

ಶಾಂತವಾಗಿ ಕುಳಿತು ಟೀವಿ ನೋಡಬೇಕು. ಯಾವ ವಾಹಿನಿ ಸೂಕ್ತ?



ಸಿಸಿಟಿವಿ.

ಬಿ. ಚಂದ್ರೇಗೌಡ, ಬೆಂಗಳೂರು

ಗಣಿತದ ಲೆಕ್ಕಾಚಾರಕ್ಕೂ, ಬದುಕಿನ ಲೆಕ್ಕಾಚಾರಕ್ಕೂ ಏನು ವ್ಯತ್ಯಾಸ?

ಗಣಿತದಲ್ಲಿ ನೂರನ್ನು ಸುಲಭವಾಗಿ ತಲುಪಬಹುದು.

ಹೆಚ್.ವಿ. ಶ್ರೀಧರ್, ಬೆಂಗಳೂರು

'ಉಗಿಯೋದು' ಸರಿ. 'ಉಗಿದು ಉಪ್ಪು ಹಾಕಿದ' ಎಂದರೇನು?

ಉಪ್ಪು ಹಾಕಿದರೆ ಮಂಜು ಕರಗುತ್ತದೆ. 'ಮಂಜಿನಂತಹವನು ಕರಗುವವರೆಗೆ ಉಗಿದ' ಎಂದು.

ವಿ. ಹೇಮಂತಕುಮಾರ್, ಬೆಂಗಳೂರು

ಹಸುವಿನ ಹಾಲನ್ನು ಕುಡಿದವರೆಲ್ಲರಿಗೂ ಗೋಮಾತೆ ಎರಡನೆಯ ತಾಯಿ ಇದ್ದಂತಲ್ಲವೆ?



ತಾಯಿಯಂತೆಯೇ ಹಸುವನ್ನೂ ವೃದ್ಧಾಪ್ಯದಲ್ಲಿ ಹೊರಕ್ಕೆ ಅಟ್ಟುವುದರಿಂದ– ಅನ್ನಬಹುದು.

ಎಲ್.ಐ.ಸಿ. ವಿಜೇಂದ್ರ, ಮೈಸೂರು

ಕೆಲವು ಹೆಂಗಸರೇಕೆ ಯಾವಾಗಲೂ ಗೊಣಗುಟ್ಟುತ್ತಲೇ ಇರುತ್ತಾರೆ?

ಕೆಲವು ಗಂಡಸರು ಅವರನ್ನು ಹಾಗೆ ಇರಿಸಿರುವುದರಿಂದ.

ಪಿ. ಜಯವಂತ ಪೈ, ಕುಂದಾಪುರ

ಜಿಪುಣನಿಗೂ, ನಿಪುಣನಿಗೂ ವ್ಯತ್ಯಾಸವೇನು?

ಒಂದೇ ಅಕ್ಷರ ವ್ಯತ್ಯಾಸ – ಇವನು ಧನಚರ, ಅವನು ಸಾಧನಚರ.

ಜಯತೀರ್ಥ ಶ್ರೀಪತಿ, ಹುಬ್ಬಳ್ಳಿ

ಸಜ್ಜನಿಕೆ ತೋರಿ ಮದುವೆಯಾದರೆ ಅದು ನನ್ನ ದೋಷವೆ ರಾಮ್?

ಆದರೆ ನೀವು ಸಜ್ಜನಿಕೆ ತೋರಿದ್ದು ಒಬ್ಬರಿಗೆ, ಮದುವೆಯಾದದ್ದು ಇನ್ನೊಬ್ಬರನ್ನಂತಲ್ಲ!

ಮಲ್ಲಿಕಾರ್ಜುನ, ಸುರಧೇನುಪುರ

ಪ್ರಜಾಪ್ರಭುತ್ವದಲ್ಲಿ ಪುರುಷರು ರಾಜಕಾರಣಿ. ಸ್ತ್ರೀ?

ಅದೇ ಪದದ ಮೊದಲ–ಕೊನೆಯ ಅಕ್ಷರಗಳ ಜೋಡಿ.

ರಾಜೇಶ್ವರಿ ಮಯ್ಯ, ಬಲ್ಲೇರಿ

ಜೀವದಾಯಿನಿಯಾದ ಮಳೆ ರಣರಾಕ್ಷಸ, ರಣಭೀಕರನಾದುದು ಯಾವಾಗ?

ಇರುವ ಗುಡ್ಡ godಉಗಳನ್ನೆಲ್ಲ ಅಲುಗಾಡಿಸಿ ನಮ್ಮ ಹಳ್ಳವನ್ನು ನಾವೇ ತೋಡಿಕೊಂಡಾಗ.

ಬಿ.ಸಂ. ಸುಬ್ಬಣ್ಣ, ಬೆಂಗಳೂರು

ಚುನಾವಣಾ ಬಾಂಡ್‌ಗೂ, ಬಾಂಡ್ ಸಿನಿಮಾಗಳಿಗೂ ಏನಾದರೂ ನಂಟು ಇರಬಹುದೆ ಸರ್?

ಇದೆಯಲ್ಲ. ಎರಡೂ ಕಟ್ಟು ಕಥೆಗಳೇ.

ಅನಸೂಯ ಟಿ. ಕೇದಿಗೆಮನೆ

'ಜನ ಏನ್ ತಿಳ್ಕೋತಾರೋ' ಎಂದು ಅವರಿಗಾಗಿ ಬದುಕುವುದು ಸರಿಯೆ?

ಅಗತ್ಯವಿಲ್ಲ. ಆದರೆ ರಾಜಕಾರಣಿಯ ಮಟ್ಟದ ಭಂಡತನ ಇರಬೇಕಷ್ಟೆ.

ಎಚ್.ಕೆ. ವಿಜಯಕುಮಾರ್, ರಾಯಚೂರು

ರಾಜಕಾರಣಿಗಳ ಕಾಲಿದ್ದಂತೆ ತಲೆ ನಡೆದುದುಂಟೆ?

ಊಹೂಂ. ಅವರ ತಲೆ ಕ್ರಮಿಸುವ ಕೆಟ್ಟ ಹಾದಿಯನ್ನು ಯಾವ ಕಾಲೂ ಕ್ರಮಿಸಲಾಗದು.

ಶಿವಮೊಗ್ಗ ರಮೇಶ್, ಮೈಸೂರು

ವಿರಕ್ತ ಸ್ವಾಮಿಗಳು ಪ್ರಶಸ್ತಿ, ಪುರಸ್ಕಾರ, ಬಿರುದುಗಳಿಗೆ ಕೊರಳೊಡ್ಡುವುದು ಎಷ್ಟು ಸರಿ?

ಮನಸ್ಸೊಡ್ಡಿದರೆ ತಪ್ಪು. ಸೆಳೆತಕ್ಕೆ ದೂರವಿದ್ದು ದೂರವಿರುವುದಕ್ಕಿಂತ ಸೆಳೆತದ ಮಧ್ಯದಲ್ಲಿದ್ದು ದೂರವಿರುವುದೇ ವಿರಕ್ತಿ.

## ಬಹುಮಾನಿತ ಪ್ರಶ್ನೆ

ಎನ್.ವಿ. ಭಟ್, ಶಿವಮೊಗ್ಗ

ದಂತಕತೆಯಲ್ಲಿ ದಂತಕ್ಕೇನು ಕೆಲಸ ರಾಮ್‌ಜೀ?

'ಅದಂತ', 'ಇದಂತ', 'ಹೌದಂತ', ನಿಜಕ್ಕೂ 'ಆಗಿದ್ದಂತ'ಗಳು ಸೇರಿಯೇ ದಂತಕತೆ ಆಗುವುದು.

ರತ್ನಜ, ಮೈಸೂರು

'ಮಾನವ' ಎಂದರೆ 'ಮಾನ' ಇರುವವನೋ?

ಹೌದು. ನವ ದಶಕಗಳು ಮಾನದಿಂದ ಇರಬಲ್ಲವನೇ ಮಾನವ.

ರಾಜೀವ್ ಎನ್. ಮಾಗಲ್, ಸಕಲೇಶಪುರ

ಅಪ್ಪಟ ಕನ್ನಡದವರಿಗೆ ಕನ್ನಡ ಓದುವ ಸ್ಪರ್ಧೆ ಏರ್ಪಡಿಸಿದರೆ ಹೇಗಿರುತ್ತದೆ?

ಎಚ್ಚರ! 'ನಮ್ಮದೇ ಅಪ್ಪಟ ಕನ್ನಡ' ಎನ್ನುವ ಹಲವಾರು ವಿಭಿನ್ನ ಕನ್ನಡಿಗರಿದ್ದಾರೆ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

ಮದುಮಗಳು ಗಂಡನ ಮನೆಯನ್ನು ಪ್ರವೇಶಿಸುವಾಗ ಅಕ್ಕಿ ತುಂಬಿದ ಸೇರನ್ನು ಹೊಸ್ತಿಲಲ್ಲಿ ಒದ್ದು ಬರುವುದೇಕೆ?



ನಾನು ಈ ಮನೆಯನ್ನು 'ಸೇರು'ವುದು ಇಲ್ಲಿ 'ಬತ್ತ'ದ ನೆಮ್ಮದಿ ಹರಡಲು ಎಂದು ಸೂಚಿಸಲು.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಮಕ್ಕಳು ದೇವರ ಸಮಾನ ಅಂತಾರೆ. ಜನ್ಮ ನೀಡಿದ ತಂದೆ–ತಾಯಿ?

ಶಿಲ್ಪಿಗಳು.

ಕೆ.ವಿ. ಮಂಜುನಾಥ್, ಕೆ.ಟಿ. ಹಳ್ಳಿ

ಗಂಗಾನದಿಯು ಮಲಿನವಾಗಲು ಕಾರಣವೇನು ಗುರುವೆ?

'ಪಾಪಿಗಳ ಪಾಪವನ್ನು ತೊಳೆದೂ ತೊಳೆದೂ' ಎಂದಿದ್ದಾರೆ ರಾಜ್ ಕಪೂರ್.

■ ರಾಮ್